ಕೊನೆಯಪಕ್ಷ ವಿರೋಧಪಕ್ಷದಲ್ಲಿರುವಂತಹ ಶಾಸಕರು ಕಳುಹಿಸಿರುವಂತಹ ಪಟ್ಟಿಯಲ್ಲಿ 1-2 ಹೆಸರನ್ನು ಆ ಸಮಿತಿಯಲ್ಲಿ ಸೇರಿಸಬೇಕಲ್ಲ. ಇವತ್ತು ನಾವು ಲೋಕಲ್‌ನಲ್ಲಿ ಮುಖವನ್ನು ತೋರಿಸಬೇಕಲ್ಲ, ಅವರು ನಿಮ್ಮ ಪಟ್ಟಿ ಏನಾಯಿತು ಎಂದು ನಮ್ಮನ್ನು ಕೇಳುತ್ತಾರೆ. ಅದಕ್ಕೆ ನಾವು ಏನು ಹೇಳಬೇಕು? ಅವರು ಕಮಿಟಿಯನ್ನು ಮಾಡಿಕೊಂಡಿದ್ದಾರೆ ಸಂತೋಷ ಇವರು ಪಟ್ಟಿಯನ್ನು ಕೇಳಿದ್ದಾರೆ, ನಮ್ಮನ್ನು ಕೇಳಬಾರದಾಗಿತ್ತು, ಇವರು ಪಟ್ಟಿಯನ್ನು ಕೇಳಿ ಏತಕ್ಕಾಗಿ ಮಾಡಲಿಲ್ಲ?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, ಪೊಲಿಟಿಕಲ್ ಅಪಾಯಿಂಟ್‌ಮೆಂಟ್ಸ್ ಆಗಿದೆ ಎಂದು ಬಿಜೆಪಿ ಶಾಸಕರು ಇಷ್ಟು ಹೊತ್ತು ಏನು ಹೇಳಿದರು, ಅವರು ಏನು ಕರ್ನಾಟಕದಲ್ಲಿ ಪೊಲಿಟಿಕಲ್ ಗೌರ್ನಮೆಂಟ್ ಏನು ನಡೆಸಿಲ್ಲ. ಅದರಿಂದ ಅವರಿಗೆ ನಿಷ್ಕಾಳಜಿ ಏನೂ ಇಲ್ಲ.

ಅಧ್ಯಕ್ಷರು : ಈಗ ನಾನು ರೂಲಿಂಗ್ ಕೊಡುತ್ತೇನೆ. ಮಾನ್ಯ ಸದಾನಂದಗೌಡರು ಈ ವಿಚಾರ ಹೈಕೋರ್ಟಿನಲ್ಲಿ ಪೆಂಡಿಗ್ ಇದೆ, ಕಂಟೆಂಪ್ಟ್ ಆಫ್ ಕೋರ್ಟ್ ನೋಟೀಸ್ ಕೊಟ್ಟಿದ್ದಾರೆಂದು ಹೇಳಿದರು... ನಾನು ಎದ್ದು ನಿಂತುಕೊಂಡಾಗ ತಾವು ಮಾತನಾಡಬಾರದು, ತಮ್ಮ ತಮ್ಮ ಆಸನದಲ್ಲಿ ಕುಳಿತುಕೊಳ್ಳಬೇಕು. ಮಾನ್ಯ ಸದಾನಂದಗೌಡರು ಈ ಸದನದ ಗಮನಕ್ಕೆ ಈ ವಿಚಾರದಲ್ಲಿ ಯಾವುದೇ ಕಮಿಟಿಗಳಾಗಲಿ, ಹೈಕೋರ್ಟ್‌ನಲ್ಲಿದೆ. ಕಂಟೆಂಪ್ಟ್ ಆಫ್ ಕೋರ್ಟ್ ಎಂದು ನೋಟೀಸನ್ನು ಹೈಕೋರ್ಟ್‌ನವರು ಕೊಟ್ಟಿದ್ದಾರೆ ಎಂದು ಗೊತ್ತಾದ ಮೇಲೆ ನಾವು ಅದರ ಬಗ್ಗೆ ಇಲ್ಲಿ ಡಿಸ್‌ಕಸ್ ಮಾಡುವುದು ಬೇಕಾಗಿಲ್ಲ, ಸಬ್‌ಜ್ಯುಡೀಸ್ ಆಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ : ಕಮಿಟಿಗಳು ಈಗಾಗಲೇ ಫಂಕ್ಷನ್ ಮಾಡಬಹುದೇ ಅಥವಾ ಬೇಡವೇ?

MR. SPEAKER : The matter is before the Court. It will be subjudice. We will not discuss all those things here.

ಗುಲ್ಬರ್ಗಾ ತಾಲ್ಲೂಕಿನ ಓಕಳಿ ಗ್ರಾಮದ ಕೆರೆಯ ನಿರ್ಮಾಣ

453 - ಶ್ರೀ ರೇವುನಾಯಕ ಬೆಳಮಗಿ (ಕಮಲಾಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿವರೆ?

ಅ) *ಗುಲ್ಬರ್ಗಾ ತಾಲ್ಲೂಕಿನ ಓಕಳಿ ಗ್ರಾಮದಲ್ಲಿ ಸಣ್ಣ ನೀರಾವರಿ ಕೆರೆ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?*

ಆ) *ಹಾಗಿದ್ದಲ್ಲಿ ಈ ಪ್ರಸ್ತಾವನೆಗೆ ಕಳೆದ 3 ವರ್ಷಗಳಿಂದಲೂ ಅನುಮತಿ ನೀಡದ ಇರಲು ಕಾರಣವೇನು?*

ಇ) *ಕಳೆದ ಮೂರು ವರ್ಷಗಳಿಂದ ಇದಕ್ಕಾಗಿ ಎಷ್ಟು ಮೊತ್ತದ ಅಂದಾಜು ತಯಾರಿಸಲಾಗಿತ್ತು. ಈಗ ಅಂತಿಮವಾಗಿ ಎಷ್ಟು ಮೊತ್ತದ ಅಂದಾಜು ಪಟ್ಟಿ ತಯಾರಿಸಲಾಗಿದೆ?*

ಈ) *ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಇದೆ.

ಆ) ಅಂದಾಜು ಪತ್ರಿಕೆ ಆಡಳಿತಾತ್ಮಕ ಅನುಮೋದನೆ ಪಡೆಯಲು ಅವಶ್ಯಕವಾದ ಶೇಕಡಾ 30 ರಷ್ಟು ಅನುದಾನ ಕೊರತೆ ಕಾರಣವಾಗಿರುತ್ತದೆ.

ಇ) 1)	1998-99	450.00 ಲಕ್ಷಗಳು
2)	1999-2000	450.00 ಲಕ್ಷಗಳು
3)	2000-2001	300.00 ಲಕ್ಷಗಳು

ಈ) ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯಿಂದ ಅನುಮೋದನೆ ಪಡೆದು ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದ ನಂತರ ಕೆಲಸ ಪ್ರಾರಂಭಿಸಲಾಗುವುದು.

ಶ್ರೀ ರೇವುನಾಯಕ ಬೆಳಮಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ, ಆದರೆ ನನಗೆ ಆದರಿಂದ ತೃಪ್ತಿ ಆಗಿಲ್ಲ. ಹಿಂದೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ರವರು ಸಣ್ಣ ನೀರಾವರಿ ಮಂತ್ರಿಗಳಾಗಿದ್ದಾಗಲೂ ಕೂಡ ಇದರ ಬಗ್ಗೆ ನಾನು ಪ್ರಸ್ತಾವನೆ ಮಾಡಿದ್ದೆ. ಮಾನ್ಯ ತಿಪ್ಪೆಸ್ವಾಮಿಯವರು ಇದ್ದಾಗಲೂ ಕೂಡ ಪ್ರಸ್ತಾಪ ಮಾಡಿದ್ದೆ, ಇಂತಹ ಉತ್ತರಗಳು ಬಂದಿದೆ. ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಕಳೆದ ಸದನದಲ್ಲಿ ನಾನು ಸಚಿವರಲ್ಲಿ ಕೇಳಿಕೊಂಡಿದ್ದೆ, ಅವರು ಮುಂದಿನ ವರ್ಷದಲ್ಲಿ ಏನಾದರೂ ಕೂಡ ಮಾಡಿ ಕೊಡುತ್ತೇವೆಂದು ಹೇಳಿದರು ಇವತ್ತು ಉತ್ತರವನ್ನು ಏನು ಒದಗಿಸಿದ್ದಾರೆ ಅದರಲ್ಲಿ ಅಂದಾಜು ಪತ್ರಿಕೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲು ಅವಶ್ಯಕವಾದ ಶೇಕಡ 30 ರಷ್ಟು ಅನುದಾನ ಕೊರತೆ ಕಾರಣವಾಗಿದೆ ಎಂದು ಹೇಳಿದ್ದಾರೆ, ಅಂದರೆ 30 ಪರ್ಸೆಂಟ್ ಅನುದಾನ ಇರಲಾರದ ಮಟ್ಟಿಗೆ ಈ ಕೆರೆ ನಿರ್ಮಾಣಕ್ಕೆ ಅನುಮತಿ ನೀಡದಿರಲು ಕಾರಣವಾಗಿದೆ ಎಂದು ಹೇಳಿದ್ದಾರೆ. ಈಗ ನಾನು ಮಾನ್ಯ ಸಚಿವರಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಈ ಒಕಳಿ ಕೆರೆ ಎಂದರೆ ನಾಲ್ಕುವರೆ ಕೋಟಿ ರೂಪಾಯಿಗಳ ಎಸ್ಟಿಮೇಟ್ ಆಗಿ 45 ಲಕ್ಷ ರೂಪಾಯಿಗಳ ಅನುದಾನವನ್ನು ಇಟ್ಟಾಗ ನಿಮ್ಮ ಸರ್ಕಾರದವರು ಹೇಳಿದಾಗ ನಾನು ಹೊಸದಾಗಿ ಎಂಎಲ್ಎ ಆಗಿದ್ದೆ, ಟೆಕ್ನಿಕಲ್ ಅಪ್ರೂವಲ್ ಏನೋ, ಆಡಳಿತಾತ್ಮಕ ಅಪ್ರೂವಲ್ ಏನೋ ನನಗೆ ಗೊತ್ತಾಗಲಿಲ್ಲ. ನಮಗೆ ಏನು ಆಗಬೇಕೆಂದರೆ ಒಕಳಿ ಗ್ರಾಮದಲ್ಲಿ ಸಣ್ಣ ನೀರಾವರಿ ಕೆರೆ ಆಗಲೇಬೇಕು, ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಕೂಡ ಈ ಮಾತನ್ನು ಹೇಳಿದ್ದಾರೆ. ಇಡೀ ರಾಜ್ಯದಲ್ಲಿ ಹಸಿರುಕ್ರಾಂತಿಯಾಗಬೇಕಾದರೆ ನೀರಾವರಿಗೆ ಒತ್ತನ್ನು ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಸಹ ನೀರಾವರಿಗೆ ಹೆಚ್ಚು ಒತ್ತನ್ನು ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಕೂಡ ಇದರ ಬಗ್ಗೆ ಹೇಳಿದ್ದಾರೆ. ಒಕಳಿ ಗ್ರಾಮಕ್ಕೆ ಹೋದರೆ ರೈತರು ಕೂಲಿ ಕಾರ್ಮಿಕರು ನಮಗೆ ಕ್ರಿಟಿಸೈಸ್ ಮಾಡುತ್ತಾರೆ. ಕಮಲಾಪುರದ ಶಾಸಕರು ಕೆರೆ ಮಾಡಿಸಿದ್ದಾರೆ, ಹುರುಳಿ ಹೇಗಿದೆ? ಮೆಣಸಿನಕಾಯಿ ಹೇಗಿದೆಯೆಂದು ಕೇಳುತ್ತಿದ್ದಾರ?

ಅಧ್ಯಕ್ಷರು : ಮಾನ್ಯ ಸದಸ್ಯರು ಪ್ರಶ್ನೆ ಕೇಳಿ.

ಶ್ರೀ ರೇವುನಾಯ್ಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ, ನನ್ನ ನೋವು ಏನೆಂಬುದನ್ನು ಹೇಳುತ್ತಿದ್ದೇನೆ. ಅಲ್ಲಿ ಜನರು ನನಗೆ ಕ್ರಿಟಿಸೈಸ್ ಮಾಡುತ್ತಿದ್ದಾರೆ. ತಾಂತ್ರಿಕ ಮೌಲ್ಯ ನಿರ್ಮಾಣ ಸಮಿತಿಯಿಂದ ಅನುಮೋದನೆಯನ್ನು ಪಡೆದು ಅಡಳಿತಾತ್ಮಕವಾಗಿ ಹಾಗೂ ತಾಂತ್ರಿಕವಾಗಿ ಮಂಜೂರಾತಿಯನ್ನು ಪಡೆದು ನಂತರ ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಈ ಕೆರೆಯನ್ನು ಯಾವಾಗ ಮಾಡುತ್ತೀರಿ? ಈ ಬಗ್ಗೆ ನನಗೆ ನಿರ್ದಿಷ್ಟವಾದ ಸಮಯವನ್ನು ಹೇಳಬೇಕು. ನನ್ನ ಶಾಸಕತ್ವದ ಅವಧಿಯಲ್ಲಿ ಕೆರೆಯ ನಿರ್ಮಾಣ ಆಗುತ್ತದೆಯೋ ಅಥವಾ ಇಲ್ಲವೋ ಆವೊಂದು ಭಯ ನನಗೆ ಬರುತ್ತಿದೆ. ಮಾನ್ಯ ಸಚಿವರು ನನಗೆ ಒಂದು ಮಾತನ್ನು ಹೇಳಿದರು. ಊಳಗುಂದ ಕೆರೆಯ ಬಗ್ಗೆ ಅವರಲ್ಲಿ ಪ್ರಸ್ತಾಪ ಮಾಡಿದೆ, ಅಲ್ಲಿ ಬಹಳ ರೈತರು ಬೀದಿ ಪಾಲಾಗಿದ್ದಾರೆ, ಕೆರೆ ಮಾಡಿ ವ್ಯವಸಾಯ ಮಾಡಲಾರದ ಹಾಗೆ ಆಗಿದೆ, ಕೆರೆಯ ಕೆಳಗೆ ನೀರು ಹರಿಯುತ್ತಿದೆ, 50 ಎಕರೆ ಭೂಮಿ ಅಲ್ಲಿ ಬೀಳಾಗಿದೆ, ಸಣ್ಣ ನೀರಾವರಿ ಮಂತ್ರಿಗಳು ಗುಲ್ಬರ್ಗಾಕ್ಕೆ ಭೇಟಿ ಕೊಟ್ಟಾಗ ಆ ಕೆರೆಗೆ ಪರಿಹಾರ ಒದಗಿಸುತ್ತೇವೆಂದು ಹೇಳಿದರು. ಆದರೆ ಅದು ಏನಾಯಿತೋ ಗೊತ್ತಾಗಲಿಲ್ಲ? ಆದೇ ತರಹ ಈ ಕೆರೆ ಆಗಲಾರದಹಾಗೆ ತೀವ್ರಗತಿಯಲ್ಲಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಟಿಎಸಿ ಕ್ಲಿಯರೆನ್ಸ್ ಬಗ್ಗೆ ಸ್ವಲ್ಪ ಸಮಸ್ಯೆಯಾಗಿದೆ. ಏಕೆಂದರೆ ಇದಕ್ಕೆ ಮುಂಚೆ 450 ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಲಾಗಿತ್ತು. ಅದು ಈಗ 300 ಲಕ್ಷ ರೂಪಾಯಿಗಳಿಗೆ ಇಳಿದಿದೆ. ಏಕೆಂದರೆ ಈ ಮುಂಚೆ ಬೇಸ್‌ಮೆಂಟ್ ಮಾಡಲಿಕ್ಕೆ ಕಲ್ಲು ಬಹಳ ಕೆಳಗಡೆ ಸಿಗುತ್ತದೆಂದು ಎಸ್ಟಿಮೇಟ್ ಮಾಡಿದ್ದರು. ಈಗ 300 ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಕಾಸ್ಟ್ ಇಳಿಸಿದ್ದೇವೆ. ಅದಕ್ಕೆ ಬೇಕಾಗಿರತಕ್ಕ ಹಣಕಾಸನ್ನು ಒದಗಿಸಿಕೊಳ್ಳುತ್ತಿದ್ದೇವೆ. ಹೊಸ ಕೆರೆ ನಿರ್ಮಾಣದ ಹೆಡ್‌ನಲ್ಲಿ ಅಷ್ಟು ಹಣ ಇರಲಿಲ್ಲ ಆ ಹಣಕಾಸನ್ನು ಒದಗಿಸಿಕೊಂಡು ತಕ್ಷಣ ಕೆಲಸವನ್ನು ಮಾಡುವುದಕ್ಕೆ ಸಂಪೂರ್ಣ ಒತ್ತು ಕೊಡುತ್ತೇವೆ. ಒಕಳಿ ಗ್ರಾಮದಲ್ಲಿ ಈ ನೀರಾವರಿ ಕೆರೆಗೆ ನಾವು ಬಹಳ ಒತ್ತನ್ನು ಕೊಟ್ಟಿದ್ದೇವೆ, ಇದು ಸರ್ಕಾರದ ಗಮನದಲ್ಲಿದೆ, ತಕ್ಷಣ ಹಣಕಾಸನ್ನು ಒದಗಿಸಿಕೊಂಡು ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎ. ರಾಮದಾಸ್ : ಮಾನ್ಯ ಮಂತ್ರಿಗಳೇ, ತಾವು ಇನ್ನೂ ಯುವಕರಿದ್ದೀರಿ ಕಳೆದ ಮೂರು ವರ್ಷಗಳಿಂದ, ಸರ್ಕಾರ ಕೊಟ್ಟ ಉತ್ತರ ಇಲ್ಲಿದೇ, ಈ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಯಾವ್ಯಾವ ವರ್ಷಕ್ಕೆ ಎಷ್ಟೆಷ್ಟು ಎಸ್ಟಿಮೇಟ್ ಆಗಿದೆ ಎಂದು ಹೇಳಿದ್ದೀರಿ. ಆದರೆ ತಾಂತ್ರಿಕವಾದಂತಹ ಒಂದು ಅನುಮೋದನೆಯನ್ನು ತೆಗೆದುಕೊಳ್ಳುವುದು ಬಾಕಿ ಇರುವಂತಹ ವಿಚಾರ. ನನ್ನ ಪ್ರಶ್ನೆ ಏನೆಂದರೆ ಯಾವತ್ತಿನಿಂದ ಕೆಲಸ ಪ್ರಾರಂಭ ಮಾಡುತ್ತೀರಿ? ಕಳೆದ ಮೂರು ವರ್ಷಗಳಿಂದ ಇದೇ ಉತ್ತರವನ್ನು ಕೊಟ್ಟಿದ್ದೀರಿ, ಟೆಕ್ನಿಕಲ್ ಅಪ್ರೂವಲ್ ಇರಬಹುದು ಅಥವಾ ಯಾವುದೇ ಅಡ್ಮಿನಿಸ್ಟ್ರೇಟಿವ್ ಅಪ್ರೊವಲ್ ಇರಬಹುದು ಅದನ್ನು ತಾವು ಮಾಡಿಕೊಂಡು ಕಟ್ ಆಫ್ ಡೇಟ್-ಯಾವ ವರ್ಷದಿಂದ ಕೆಲಸ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಮಾನ್ಯ ಸದಸ್ಯರಿಗೆ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಈಗ ತಾವು ಕೇಳಿದಹಾಗೆ 1998-99 ಮತ್ತು 1999-2000ದ ಇಸವಿಗೆ 450ಲಕ್ಷ ರೂಪಾಯಿಗಳ ಎಸ್ಟಿಮೇಟ್ ಇದ್ದದ್ದು 2000-2001ನೇ ಇಸವಿಗೆ 300 ಲಕ್ಷ ರೂಪಾಯಿಗಳಿಗೆ ಬಂದಿದೆ. ಇದನ್ನು ಕಡಿಮೆ ಖರ್ಚಿನಲ್ಲಿ ನಾವು ಮಾಡುತ್ತಿದ್ದೇವೆ. ಮುಂದೆ ಯಾವ ಸಮಸ್ಯೆಯೂ ಬರಬಾರದು. ಹಿಂದೆ ಟೆಕ್ನಿಕಲ್ ಅಪ್ರೂವಲ್ ಮಾಡಲಿಲ್ಲ. ಬೇರೆ ಕಡೆ ಫೌಂಡೇಶನ್ ಮಾಡಿಯೆಂದು ಹೇಳಿದ್ದಾರೆ. ಮೊನ್ನೆ ಎಸ್ಟಿಮೇಟ್ ಕಳುಹಿಸಿ ಅಲ್ಲಿ ಸಮಸ್ಯೆಗಳು ಇವೆ ತಕ್ಷಣ ಅಪ್ರೂವಲ್ ಮಾಡಬೇಕೆಂದು ಹೇಳಿದಾಗ, ಈಗ 300 ಲಕ್ಷ ರೂಪಾಯಿಗಳಿಗೆ ಅಪ್ರೂವಲ್ ಮಾಡಿದ್ದಾರೆ. 300 ಲಕ್ಷ ರೂಪಾಯಿಗಳಲ್ಲಿ ಮೂರನೆಯ ಒಂದು ಭಾಗದ ಹಣವನ್ನು ಒದಗಿಸಿಕೊಂಡು ಮೊನ್ನೆ ಆರ್ಥಿಕ ಇಲಾಖೆಯವರು ಕ್ಲಿಯರ್ ಮಾಡಿದ್ದಾರೆ. ಯಾವುದೇ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಾಗ ಮೂರನೆಯ ಒಂದು ಭಾಗ ಗ್ರಾಂಟ್ ಎಂದು ತೆಗೆದುಕೊಂಡು ಬಹಳ ವರ್ಷಗಳ ಕಾಲ ಮುಂದೆ ಹಾಕಬಾರದೆಂದು ಹೇಳಿ, ಶೇಕಡ 50:50 ಮಾಡಿಕೊಂಡು ತಕ್ಷಣ ಎರಡು ವರ್ಷಗಳಲ್ಲಿ ಮಾಡಬೇಕೆಂದು ಇದ್ದೇವೆ. ಓಕಳಿ ಗ್ರಾಮದ ಬಗ್ಗೆ ನಮ್ಮದ್ದು ಅದ್ಯತೆಯಿದೆ. ಅಲ್ಲಿಯ ರೈತರೂ ಕೂಡ ಅರ್ಜಿಯನ್ನು ಬರೆದಿದ್ದಾರೆ. ತಕ್ಷಣ ನಾವು ಅಧ್ಯತೆಯ ಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಸಣ್ಣ ನೀರಾವರಿ ಸಚಿವರು ಬಹಳ ಚುರುಕಾಗಿದ್ದಾರೆ ಆದರೆ ಅವರ ಇಲಾಖೆ ಅವರಷ್ಟು ಸ್ಪೀಡ್ ಇಲ್ಲ. ಯಾವುದೇ ಒಂದು ಎಸ್ಟಿಮೇಟ್ ಹೋದರೂ ಕೂಡ ಬೇಗ ಕ್ರಮ ತೆಗೆದುಕೊಳ್ಳುವುದಿಲ್ಲ. ನಾಲ್ಕೂವರೆ ಕೋಟಿ ರೂಪಾಯಿಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದು ನಿಮ್ಮ ಇಲಾಖೆಯೇ, ಈಗ ಅದನ್ನು ಮೂರು ಕೋಟಿಗೆ ಇಳಿಸಿರುವುದು ನಿಮ್ಮ ಇಲಾಖೆಯೇ ಅಲ್ಲಿರತಕ್ಕ ಕಛೇರಿ ಮತ್ತು ಬೆಂಗಳೂರು ಕಛೇರಿಗೆ ಪೇಪರ್ಸ್ ಅನಾವಶ್ಯಕವಾಗಿ ಓಡಾಡಿ ಮೂರು ವರ್ಷಗಳು ಕಳೆದಿದೆ. ಇದು ಒಂದು ಕ್ಷೇತ್ರದ್ದು ಅಲ್ಲ. ಎಲ್ಲಾ ಕ್ಷೇತ್ರದ್ದು ಹಾಗೆಯೇ ಇದೆ. ಇದನ್ನು ಸ್ಪೀಡ್ ಅಪ್ ಮಾಡುವುದಕ್ಕೆ ಆಗದಿದ್ದರೆ ನಿಮ್ಮ ಇಲಾಖೆಗೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಹಾಗೆಯೇ ಇರುತ್ತದೆ. ನಿಮ್ಮ ಇಂಜಿನಿಯರಿಂಗ್ ಇಲಾಖೆ ಏನೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಆ ಇಲಾಖೆಯನ್ನು ಸರಿಮಾಡುವಂತಹ ಕೆಲಸವನ್ನು ನೀವು ಮೊದಲು ಮಾಡುತ್ತೀರಾ? ಅದನ್ನು ಯಾವರೀತಿ ಮಾಡುತ್ತೀರಿ? ಇಲಾಖೆಯನ್ನು ಚುರುಕು ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ಇದೆಯೇ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಈ ವರ್ಷದಲ್ಲಿ ಯಾವುದೇ ರೀತಿಯಲ್ಲಿ ಲ್ಯಾಪ್ಸ್ ಆಗದ ರೀತಿಯಲ್ಲಿ ಡಿಸೆಂಬರ್ 31ನೇ ತಾರೀಖಿನೊಳಗೆ ಟೆಂಡರ್ ಫಾರ್ಮಾಲಿಟೀಸ್ ಮುಗಿಸಬೇಕೆಂದು ನಾವು ಈಗಾಗಲೇ ಡೈರೆಕ್ಷನ್ ಕೊಟ್ಟಿದ್ದೇವೆ. ಟೆಕ್ನಿಕಲ್ ಕ್ಲಿಯರನ್ಸ್‌ಗೆ ಮುಖ್ಯ ಇಂಜಿನಿಯರ್‌ರವರ ಕಛೇರಿಯಲ್ಲಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಕಛೇರಿಯಲ್ಲಿ, ಎಕ್ಸಿಕ್ಯುಟಿವ್ ಇಂಜಿನಿಯರ್‌ರವರ ಕಛೇರಿಯಲ್ಲಿ ಆಗಿರತಕ್ಕ ಎಲ್ಲಾ ಕಾರ್ಯಕ್ರಮಗಳನ್ನು ಮುಗಿಸಿ, ಡಿಸೆಂಬರ್ 31ನೇ ತಾರೀಖಿನೊಳಗೆ ಟೆಂಡರ್ ಕಾರ್ಯಕ್ರಮಗಳನ್ನು ಮುಗಿಸುಬೇಕೆಂದು ಈಗಾಗಲೇ ನಾವು ಡೈರೆಕ್ಷನ್ ಕೊಟ್ಟಿದ್ದೇವೆ. ಅಷ್ಟರೊಳಗೆ ಅವರು ಮಾಡಲಿಲ್ಲವೆಂದರೆ ಅವರು ಇಂಜಿನಿಯರ್ ಆಗಿರಲಿ, ಯಾರೇ ಅಧಿಕಾರಿಗಳು ಇರಬಹುದು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.